ಆ) ಪುರಸಭೆಯ ಪ್ರದೇಶದ ರಸ್ತೆ ಅಂಚಿನಲ್ಲಿರುವ ಜಾಗವು ಪುರಸಭೆಗೆ ಸಂಬಂಧಪಟ್ಟಿದ್ದೋ ಅಥವಾ ಖಾಸಗಿಯವರಿಗೆ ಸಂಬಂಧಪಟ್ಟಿದ್ದೋ ?

ಇ) ಪುರಸಭೆಗೆ ಈ ಅಂಗಡಿಗಳಿಂದ ವರ್ಷಕ್ಕೆ ಬರಬೇಕಾದ ಬಾಕಿ ಎಷ್ಟು ?

ಈ) ೨೦ ಅಂಗಡಿಗಳ ಮಾಲೀಕರು ಕೊಡಬೇಕಾದ ೭೫,೦೦೦ ರೂ. ಬಗ್ಗೆ ಕೈಗೊಂಡ ಕ್ರಮವೇನು ಇದೇ ರೀತಿ ಅವರಿಗೆ ಅಂಗಡಿಗಳನ್ನು ಅವರ ಹೆಸರಿಗೆ ಮಂಜೂರು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೧೬೫.

ಆ) ರಸ್ತೆ ಅಂಚಿನಲ್ಲಿರುವ ಜಾಗವು ಪುರಸಭೆಗೆ ಸಂಬಂಧಪಟ್ಟಿದ್ದು.

ಇ) ರೂ. ೭೫,೦೦೦

ಈ) ಜಿಲ್ಲಾಧಿಕಾರಿಗಳ ನಿರ್ಣಯಕ್ಕೆ ಕಾಯ್ದಿರಿಸಿದ್ದು. ಯಾವ ಕ್ರಮವನ್ನು ಕೈಗೊಂಡಿರುವುದಿಲ್ಲ. ಸದರೀ ಅಂಗಡಿ ಜಾಗಗಳನ್ನು ಮಂಜೂರು ಮಾಡಿರುವ ಬಗ್ಗೆ ಗಮನಕ್ಕೆ ಬಂದಿರುತ್ತೆ.

ಹೊಳವನಹಳ್ಳಿಗೆ ನೀರು ಸರಬರಾಜು ಮಾಡುವ ಬಗ್ಗೆ

೧೩೭೪. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).— ಮಾನ್ಯ ಗ್ರಾಮಾಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊರಟಗೆರೆ ತಾಲ್ಲೂಕಿನ ಹೊಳವನಳ್ಳಿ ಗ್ರಾಮಕ್ಕೆ ನೀರು ಸರಬರಾಜು ಯೋಜನೆ ಮಂಜೂರಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಾದರೆ ಅದರ ಮೊತ್ತವೆಷ್ಟು ?

ಇ) ಇಲ್ಲಿಯವರೆಗೂ ಆ ಕಾರ್ಯ ಪ್ರಾರಂಭವಾಗದಿರುವುದಕ್ಕೆ ಕಾರಣಗಳೇನು ?

ಈ) ಯಾವಾಗ ಈ ಕಾರ್ಯ ಪ್ರಾರಂಭ ಮಾಡಲಾಗುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಸಚಿವರು).—

ಅ) ಬಂದಿದೆ.

ಆ) ರೂ. ೪.೧೯ ಲಕ್ಷಗಳು.

ಇ) ೧೯೮೬-೮೭ನೇ ಸಾಲಿನ ಆಯವ್ಯಯದ ೧೬,೦೦೦ಲ್ಲಿ ರೂ.ಗಳು ಒದಗಿಸಲಾಗಿದ್ದು, ಒಟ್ಟು ಮೊತ್ತದ ಮಂಜೂರನೇ ಒಂದು ಭಾಗದ ಹಣ ಆಯವ್ಯಯದಲ್ಲಿ ಲಭ್ಯವಿಲ್ಲದೆ ಇರುವುದರಿಂದ.

ಈ) ೧೯೮೭-೮೮ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದು (ರೂ. ೧,೫೯,೭೦೦ಗಳನ್ನು ಒದಗಿಸಲಾಗಿದೆ)

ಸಂಡೂರಿನಲ್ಲಿರುವ ಕರ್ನಾಟಕ ಗೃಹ ಮಂಡಳಿಯ ಮನೆಗಳ ಬಗ್ಗೆ

೧೪೨೮. ಶ್ರೀ ಯು. ಭೂಪತಿ (ಸಂಡೂರು).— ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರು ಪಟ್ಟಣದಲ್ಲಿ ಗೃಹ ಮಂಡಳಿಯಿಂದ ಇಲ್ಲಿಯವರೆಗೆ ಕಟ್ಟಿಸಲಾದ ಮನೆಗಳ ಸಂಖ್ಯೆ ಎಷ್ಟು?

ಅ) ವಾಸವಾಗಿರುವ ಹಾಗೂ ಖಾಲಿಯಿರುವ ಮನೆಗಳು ಎಷ್ಟು?

ಇ) ಖಾಲಿ ಇರುವ ಮನೆಗಳಿಗೆ ವಾಸಕ್ಕೆ ಪಡೆಯಲು ಕೋರಿ ಎಷ್ಟು ಅರ್ಜಿಗಳು ಬಂದಿವೆ?

ಈ) ಖಾಲಿ ಇರುವ ಮನೆಗಳನ್ನು ಅರ್ಜಿದಾರರಿಗೆ ಕೊಡಲು ಇಲ್ಲಿಯವರೆಗೆ ಸರ್ಕಾರ ತೆಗೆದು ಕೊಂಡ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೧) ಎಸ್.ಆರ್.ಹೆಚ್.ಎಸ್. ಮನೆಗಳನ್ನು ಮಧ್ಯಮ ಆದಾಯ ವರ್ಗಕ್ಕೆ ಮಾರ್ಪಡಿಸಲಾದ ಮನೆಗಳು ೨೪

೨) ಕಡಿಮೆ ಆದಾಯ ವರ್ಗದ ಮನೆಗಳು (ಹಿಂದಿನ) ೪೦

೩) ಕಡಿಮೆ ಆದಾಯ ವರ್ಗದ ಮನೆಗಳು (ಈಗಿನ) ೧೦

೪) ಆರ್ಥಿಕ ದುರ್ಬಲ ವರ್ಗದ ಮನೆಗಳು ೧೬

ಒಟ್ಟು ಮನೆಗಳು ೯೦

ಅ)

	ಮಧ್ಯಮ ಆದಾಯ ವರ್ಗ	ಕಡಿಮೆ ಆದಾಯ ವರ್ಗ	ಆರ್ಥಿಕ ದುರ್ಬಲ ವರ್ಗ
ವಾಸವಾಗಿರುವ ಮನೆಗಳು	೧೯	೫೦	೧೨
ಖಾಲಿ ಇರುವ ಮನೆಗಳು	೫	—	೪

ಇ) ಖಾಲಿ ಇರುವ ಮನೆಗಳ ಹಂಚಿಕೆಗಾಗಿ ದಿನಾಂಕ ೨೭-೧-೧೯೮೭ರ ಕರ್ನಾಟಕ ಗೃಹನಿರ್ಮಾಣ ಮಂಡಳಿಯ ಪ್ರಕಟಣೆಯಂತೆ ಅರ್ಜಿಗಳನ್ನು ಕರೆಯಲಾಗಿದೆ. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕದ ೯-೪-೮೭ ಆಗಿದ್ದು ಅರ್ಜಿಗಳ ಸಂಖ್ಯೆಯನ್ನು ನಿಗದಿತ ದಿನಾಂಕದ ನಂತರ ನಿರ್ಧರಿಸ ಲಾಗುವುದು.

ಈ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಗ್ರಾಮೀಣ ಉದ್ಯೋಗ ದೃಢೀಕರಣ ಯೋಜನೆ ಬಗ್ಗೆ

೧೧೪೭. ಶ್ರೀ ವಸಂತ ಬಂಗೇರ (ಬೆಳ್ತಂಗಡಿ) — ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮಂತ್ರಿ ವರ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ೧೯೮೬—೮೭ನೇ ಸಾಲಿನಲ್ಲಿ ಗ್ರಾಮೀಣ ಉದ್ಯೋಗ ದೃಢೀಕರಣ ಯೋಜನೆಯ ಮೇರೆಗೆ ಗ್ರಾಮಾಂತರ ಪ್ರದೇಶದ ಯುವಕ ಯುವತಿ ಮತ್ತು ಭಜನಾ ಮಂಡಳಿಗಳಿಗೆ ಅವರ ಸ್ವಂತ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆಯೇ ?

ಆ) ಸದರಿ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಟ್ಟಡದ ಯುವಕ ಮತ್ತು ಯುವತಿ ಮಂಡಳಗಳ ಕಟ್ಟಡಗಳು ಎಷ್ಟು ?